# ಪತಂಗ ಪ್ರಣಯ

ಮನುಷ್ಯ ಜಗತ್ತಿಗೆ ವರ್ಷಕ್ಕೊಮ್ಮೆ ಮಾತ್ರ ಪ್ರೇಮಿಗಳ ದಿನ. ಆದರೆ ಪಾತರಗಿತ್ತಿಗಳಿಗೆ ಪ್ರತಿದಿನವೂ ಪ್ರೇಮಿಗಳ ದಿನ. ಪಾತರಗಿತ್ತಿಗಳ ಲೋಕದಲ್ಲಿ ಪ್ರೇಮಕ್ಕಾಗಿ ಯುದ್ಧವೂ ನಡೆಯುತ್ತದೆ!

■ ವಿನಾಯಕ ಕಾಮತ್
ಚಿತ್ರ: ಪ್ರಶಾಂತ್ ಭಟ್



ಪ್ರೀತಿ, ಪ್ರೇಮ, ಪ್ರಣಯಗಳು ಮನುಷ್ಯರಿಗಷ್ಟೇ ಸೀಮಿತವೇ? ಪ್ರಾಣಿ, ಪಕ್ಷಿ, ಹುಳು ಹುಪ್ಪಟೆಗಳಲ್ಲೂ ಈ ಎಲ್ಲ ಚೇಷ್ಟೆಗಳಿವೆ. ಅದರಲ್ಲೂ ಪಾತರಗಿತ್ತಿಗಳ ಪ್ರಣಯ ಅದ್ಭುತ.

ಪಾತರಗಿತ್ತಿಗಳ ಪ್ರಣಯ ಪ್ರಾರಂಭವಾಗುವುದು ಪ್ರಣಯೋತ್ಸುಕ ಗಂಡು ಪಾತರಗಿತ್ತಿ, ಹೆಣ್ಣು ಪಾತರಗಿತ್ತಿಯನ್ನು ಅರಸಿ ಹೋಗುವುದರ ಮೂಲಕ. ಬಣ್ಣ ಮತ್ತು ರಾಸಾಯನಿಕ ಸಂಕೇತಗಳ ಮೂಲಕ ತಾನು ಬೆನ್ನಟ್ಟಿರುವುದು ತನ್ನದೇ ಜಾತಿಯದ್ದು ಎಂದು ಖಚಿತವಾದ ನಂತರವಷ್ಟೇ ಗಂಡು ಮುಂದುವರಿಯುತ್ತದೆ. ಒಂದು ವೇಳೆ ಗಂಡು ಪಾತರಗಿತ್ತಿ ಬೆನ್ನಟ್ಟಿರುವುದು ಇನ್ನೊಂದು ಗಂಡು

(8ನೇ ಪುಟ ನೋಡಿ)